PW–1

ದಿ.08–11–2024 ರಂದು 2 ನೇ ಆರೋಪಿ ಮೇಲೆ ಇರುವ ಎಸ್.ಸಿ.3/2024 ಈ ಕೇಸಿನಲ್ಲಿ ವಿಲೀನವಾಗಿರುವುದರಿಂದ ಸದರಿ 2 ನೇ ಆರೋಪಿಗೆ ಸಂಬಧಪಟ್ಟಂತೆ ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.

ಇಂದು ದಿ.22–04–2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಆರೋಪಿತರು ನನ್ನ ಗಂಡನಿಗೆ ಚಾಕು ಹಾಕಿ ಚುಚ್ಚಿದ್ದರಿಂದ ಅವರು ಮೃತಪಟ್ಟಿರುತ್ತಾರೆ. ನನ್ನ ಗಂಡನ ಸಾವಿಗೆ ಕಾರಣರಾದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಅವರು ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿ 1 ಮತ್ತು 2 ಆಗಿರುತ್ತಾರೆ.

ಈ ಮೊದಲು ನುಡಿದಂತಹ ಮುಖ್ಯ ವಿಚಾರಣೆ 2 ನೇ ಆರೋಪಿಗೂ ಸಹ ಸಂಬಂಧಪಟ್ಟಂತೆ ಪರಿಗಣಿಸಬೇಕೆಂದು ಸರ್ಕಾರಿ ಅಭಿಯೋಜಕರು ವಿನಂತಿಸಿದ್ದು, ಅನುಮೋದಿಸಲಾಯಿತು.

ಪಾಟೀಸವಾಲುಃ– 1 ನೇ ಆರೋಪಿ ಶ್ರೀ ಕೆ.ಎನ್.ಆರ್ ವಕೀಲರಿಂದ.

ದಿ.17–03–2023 ರಂದು 1 ನೇ ಆರೋಪಿ ನಸರುಲ್ಲಾ ಇವರನ್ನು ನಾನು ನೋಡಿಲ್ಲ. ಸದರಿ ದಿನಾಂಕಕ್ಕಿಂತ ಮುಂಚೆ ಸಹ ನಾನು 1 ನೇ ಆರೋಪಿಯನ್ನು ನೋಡಿಲ್ಲ. ಅದೇ ಪ್ರಕಾರ ದಿ.17–03–2023 ರಂದು 2 ನೇ ಆರೋಪಿ ಮನ್ಸೂರ್ ಇವರನ್ನು ನಾನು ನೋಡಿಲ್ಲ. ಹಾಗೂ ಸದರಿ ದಿನಾಂಕಕ್ಕಿಂತ ಮುಂಚೆ ಸಹ ನಾನು 2 ನೇ ಆರೋಪಿಯನ್ನು ನೋಡಿಲ್ಲ. ಪೊಲೀಸರು ಆರೋಪಿ ನಸ್ರುಲ್ಲಾ ಮತ್ತು ಮನ್ಸೂರ್ ಇವರೇ ಇರುತ್ತಾರೆ ಎಂದು ಹೇಳಿದ ಮೇಲೆ ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಈ ದಿನ ಗುರುತಿಸಿರುತ್ತೇನೆ ಎನ್ನುವುದು ಸುಳ್ಳು.

ನನ್ನ ಗಂಡನನ್ನು ಚಾಕುವಿನಿಂದ ಕೊಲೆ ಮಾಡಿರುತ್ತಾರೆ ಎಂದು ದಿ.17-03-2023 ರ ಮಧ್ಯ ರಾತ್ರಿ 1-30 ಗಂಟೆ ಗೆ ನನಗೆ ತಿಳಿಯಿತು. ಈ ವಿಷಯವನ್ನು ನನಗೆ ಅಬಿದುಲ್ಲಾ ಎಂಬುವವರು ತಿಳಿಸಿದರು. ನಮ್ಮ ಮನೆ ಹೊನ್ನಾಳಿಯ ಟಿ ಬಿ ಸರ್ಕಲ್ ನಲ್ಲಿ ಇದೆ. ಟಿ ಬಿ ಸರ್ಕಲ್ ನಿಂದ 50 ಮೀಟರ್ ದೂರದಲ್ಲಿ ಪೊಲೀಸ್ ಠಾಣೆ ಇದೆ. ನಮ್ಮ ಮನೆಯಿಂದ ನಡೆದುಕೊಂಡುಹೋದರೆ ಹತ್ತು ನಿಮಿಷದಲ್ಲಿ ಠಾಣೆಗೆ ಹೋಗಬಹುದು, ನಂತರ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

ವಿಷಯ ಗೊತ್ತಾದ ನಂತರ ತಕ್ಷಣ ನಾವು ಪೊಲೀಸ್ ಠಾಣೆಗೆ ಹೋಗಿಲ್ಲ. ನಂತರ ಮೊದಲು ನಾನು ಸ್ಥಳಕ್ಕೆ ಹೋಗಿದ್ದೆ. ಸ್ಥಳಕ್ಕೆ ಹೋದಾಗ ರಾತ್ರಿಯಾಗಿದ್ದು , ನನ್ನ ಗಂಡ ಮೃತಪಟ್ಟಿದ್ದು ಕಾಣಿಸಿತು. ಉಳಿದಿದ್ದು ಏನೂ ಕಾಣಿಸಲಿಲ್ಲ.

ಹೊನ್ನಾಳಿಯ ಉತ್ತರ ಭಾಗಕ್ಕೆ ತುಂಗಭದ್ರಾ ನದಿ ಹರಿಯುತ್ತದೆ. ತುಂಗಭದ್ರಾ ನದಿಯಿಂದ ಆ ಕಡೆ ಹೋಗಬೇಕಾದರೆ ಸೇತುವೆ ಇದೆ , ಆ ಸೇತುವೆ ಮೇಲೆ ನಾವು ಹೋಗಬೇಕು ಎನ್ನುವುದು ನಿಜ. ನಾನು ನಮ್ಮ ಮನೆಯಿಂದ ಬೈಕಿನಲ್ಲಿ ನನ್ನ ಸಂಬಂಧಿಕರ ಜೊತೆ ಸ್ಥಳಕ್ಕೆ ಬಂದೆ. ನದಿಯ ದಡದಲ್ಲಿ ಬೈಕ್ ನಿಲ್ಲಿಸಿ , ಕೆಳಗೆ ಇಳಿದುಕೊಂಡು ಸ್ಥಳಕ್ಕೆ ಬರಬೇಕು. ನಾನು ನೋಡಿದ ಸ್ಥಳ ಸಂಪೂರ್ಣ ನದಿ ಪಾತ್ರವಾಗಿತ್ತು ಎನ್ನುವುದು ಸುಳ್ಳು. ಅಡಿಕೆ ತೋಟ ಇತ್ತು. ನನ್ನ ಗಂಡನ ಮೃತ ದೇಹವನ್ನು ನೋಡಿದ ಸ್ಥಳ ಅಡಿಕೆ ತೋಟ ಇದೆ, ಅಡಿಕೆ ತೋಟದಿಂದ ಸುಮಾರು ಹತ್ತು ಹೆಜ್ಜೆ ದೂರದಲ್ಲಿ ನನ್ನ ಗಂಡನ ಶವ ಇತ್ತು. ನಾನು ನೋಡಿದ ಸ್ಥಳದಲ್ಲಿ ಕಲ್ಲು, ಮಣ್ಣು ಇತ್ತು. ಹಾಗೂ ಆ ಸ್ಥಳದಲ್ಲಿ ಒಡೆದ ಬಾಟಲಿ ಚೂರುಗಳು ಸಹ ಇದ್ದವು. ಆ ಸ್ಥಳದಿಂದ ಗೊಲ್ಲರಹಳ್ಳಿ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಹೊಗುವಾಗ ಗೊಲ್ಲರಹಳ್ಳಿ ಸಿಕ್ಕಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ನೋಡಿದ ಸ್ಥಳದಿಂದ ಹೊನ್ನಾಳಿ ಎಷ್ಟು ದೂರದಲ್ಲಿದೆ ಎಂದು ನನಗೆ ಗೊತ್ತಿಲ್ಲ. ಮೃತ ದೇಹವನ್ನು ನೋಡಿದ ಸಮಯದಲ್ಲಿ ನಮ್ಮ ಸಂಬಂಧಿಕರು ಇದ್ದರು , ದೂರು ಕೊಟ್ಟ ನಂತರ ಸ್ಥಳಕ್ಕೆ ಪೊಲೀಸರು ಬಂದರು. ನೋಡಿ ತಕ್ಷಣ ದೂರನ್ನು ಕೊಡಲಾಯಿತು. ನೋಡಿ ದೂರು ಕೊಟ್ಟಾಗ ಸಮಯ ಎಷ್ಟಾಗಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ರಕ್ತದ ಮಡುವಿನಲ್ಲಿದ್ದ ನನ್ನ ಗಂಡನನ್ನು ನೋಡಿ ಗಾಭರಿಯಾಯಿತು , ಆದರೂ ಸಹ

ಪೊಲೀಸ್ ಠಾಣೆಗೆ ದೂರು ಕೊಡಲಾಯಿತು. ದೂರು ಕೊಡಲು ಪೊಲೀಸ್ ಠಾಣೆಗೆ ನಾನು ಮತ್ತು ನನ್ನ ಸಂಬಂಧಿಕರು ಹೋಗಿದ್ದೇವು.

ನಾನು ನಿಪಿ.1 ದೂರಿನಲ್ಲಿ ಏಕಾಏಕಿ ತನ್ನ ಬಳಿ ಇದ್ದ ಯಾವುದೋ ಆಯುಧದಿಂದ ನನ್ನ ಗಂಡನ ಎಡ ಕುತ್ತಿಗೆಗೆ ಬಲವಾಗಿ ಇರಿದಿದ್ದು ಅಂತಾ ನಾನು ಬರೆಸಿರುವುದಿಲ್ಲ. ಸದರಿ ದಾಖಲೆ ನಿಪಿ.1 ಅಂತಾ ಈಗಾಗಲೇ ಗುರುತಿಸಲಾಗಿದ್ದು , ಸದರಿ ವಿಷಯವನ್ನು ನಿಡಿ.2 ಎಂದು ಗುರುತಿಸಲಾಯಿತು.

ದಿ.21-03-2023 ರಂದು ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿದಾಗ ಏಕಾಏಕಿ ನಸ್ರೂಲ್ಲಾ ಈತನು ತನ್ನ ಬಳಿ ಇದ್ದ ಯಾವುದೋ ಆಯುಧದಿಂದ ನಿನ್ನ ಗಂಡನ ಎಡ ಕುತ್ತಿಗೆಗೆ ಬಲವಾಗಿ ಇರಿದಿದ್ದು , ಎಂದು ನಿಡಿ. 3 ರಂತೆ ನಾನು ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯಲ್ಲಿರುವ ರುಜು ನನ್ನದೇ ಇರುತ್ತದೆ. ಪೊಲೀಸರು ನನಗೆ ಹೆದರಿಸಿ ಬೆದರಿಸಿ ಒತ್ತಡ ಹೇರಿ ಇದೇ ರೀತಿ ಹೇಳಿಕೆ ಹೇಳಬೇಕು ಎಂದು ಹೇಳಿದ್ದರಿಂದ ನಾನು ಹೇಳಿಕೆ ನೀಡಿರುತ್ತೇನೆ ಎನ್ನುವುದು ಸುಳ್ಳು.

ಚಾಸಾ-9 ಅಬಿದುಲ್ಲಾ ಈತನು ನನ್ನ ಬಳಿ ಬಂದು -ಆರೋಪಿತರು ಇಬ್ಬರು ಎಡಕುತ್ತಿಗೆಗೆ 1 ನೇ ಆರೋಪಿ ನಸ್ರೂಲ್ಲಾ ಈತ ಎಡಭಾಗದ ಕುತ್ತಿಗೆಗೆ ಮತ್ತು ಬಲಭುಜದ ಹಿಂಭಾಗದಲ್ಲಿ ಮನ್ಸೂರ್ ಇವರು ಚಾಕುವಿನಿಂದ ಚುಚ್ಚಿ , ಓಡಿ ಹೋದರು ಎಂದು ಹೇಳಿದ. ಈ ವಿಷಯವನ್ನು ನಾನು ನಿಪಿ.1 ದೂರಿನಲ್ಲಿ ಹೇಳಿ ಬರೆಸಿರುತ್ತೇನೆ. ಈ ವಿಷಯವನ್ನು ನಿಪಿ.1 ದೂರಿನಲ್ಲಿ ಬರೆಸಿಲ್ಲದಿದ್ದರೂ ಸಹ ನಾನು ಬರೆಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು.

ದಿ.18-03-2023 ರಂದು ನಿಪಿ.8 ರಂತೆ ಪಂಚನಾಮೆ ಮಾಡಿದರು. ಸ್ಥಳವನ್ನು ನಾನೇ ಪೊಲೀಸರಿಗೆ ತೋರಿಸಿರುತ್ತೇನೆ. ನಿಪಿ.8 ಮಹಜರ್ ನಲ್ಲಿ – ನಸ್ರೂಲ್ಲಾ ಮತ್ತು ಮನ್ಸೂರ್ ಇಬ್ಬರೂ ನನ್ನ ಗಂಡ ಮತ್ತು ಅಬಿದುಲ್ಲಾ ಗೆ ಬೈದು , ನಸ್ರೂಲ್ಲಾ ಈತನು ತನ್ನ ಬಳಿ ಇದ್ದ ಯಾವುದೋ ಆಯುಧದಿಂದ ನನ್ನ ಗಂಡನ ಎಡ ಕುತ್ತಿಗೆ ಕೆಳ ಭಾಗದಲ್ಲಿ

ಬಲವಾಗಿ ಚುಚ್ಚಿ ಇರಿದು ಕೊಲೆ ಮಾಡಿದ ಸ್ಥಳ ಇದೇ ಅಂತಾ ಹೇಳಿ ತೋರಿಸಿದ ಸ್ಥಳ ಅಂತಾ ಹೇಳಿ ಬರೆಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೋ ಆಯುಧ ಎಂದು ನಾನು ಹೇಳಿ ಬರೆಸಿಲ್ಲ ಎಂದು ಉತ್ತರಿಸಿದ್ದರಿಂದ ಯಾವುದೋ ಆಯುಧ ಇದನ್ನು ನಿಡಿ.4 ಎಂದು ಗುರುತಿಸಲಾಯಿತು.

ಚಾಕುವಿನಿಂದ ಚುಚ್ಚಿದ ವಿಚಾರ ಬರ್ತಡೇ ಪಾರ್ಟಿ ಬಗ್ಗೆ ಪೊಲೀಸರು ಮಹಜರ್ ನಲ್ಲಿ ಬರೆದ ವಿಷಯ ನನಗೆ ಗೊತ್ತು. ಇನ್ನುಳಿದ ವಿಷಯ ನನಗೆ ಗೊತ್ತಿಲ್ಲ. ನಿಪಿ.8 ಮಹಜರ್ ನಲ್ಲಿ ಚಾಕುವಿನಿಂದ ಚುಚ್ಚಿದ್ದರ ಬಗ್ಗೆ ಉಲ್ಲೇಖ ಇಲ್ಲದಿದ್ದರೂ ಸಹ ಚಾಕುವಿನಿಂದ ಚುಚ್ಚಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನನ್ನ ಮದುವೆ ಪೂರ್ವದಲ್ಲೂ ಸಹ ನನ್ನ ಗಂಡ ಹಣ್ಣಿನ ವ್ಯಾಪಾರ ಮಾಡಿಕೊಂಡಿದ್ದ. ನನ್ನ ಗಂಡ ಹಣ್ಣಿನ ಸರಕು ವ್ಯಾಪಾರ ಮಾಡುತ್ತಿದ್ದರು. ಚಾಸಾ-9 ಅಬಿದುಲ್ಲಾ ಸಹ ಹಣ್ಣಿನ ವ್ಯಾಪಾರ ಮಾಡುತ್ತಿದ್ದರು. ನನಗೆ ಗೊತ್ತಿರುವ ಪ್ರಕಾರ ಚಾಸಾ-9 ಅಬಿದುಲ್ಲಾ ಇವರ ಕೆಲಸ ಹಣ್ಣಿನ ವ್ಯಾಪಾರ ಮಾಡುವುದು ಇರುತ್ತದೆ. ನನ್ನ ಗಂಡ ಮತ್ತು ಚಾಸಾ-9 ಇಬ್ಬರೂ ಸೇರಿ ಹಣ್ಣಿನ ವ್ಯಾಪಾರ ಮಾಡುತ್ತಿರಲಿಲ್ಲ , ಇಬ್ಬರೂ ಪ್ರತ್ಯೇಕವಾಗಿ ವ್ಯಾಪಾರ ಮಾಡುತ್ತಿದ್ದರು. ನನ್ನ ಮದುವೆ ಮುಂಚಿತವಾಗಿ ನನ್ನ ಗಂಡ ಮತ್ತು ಚಾಸಾ-9 ಇಬ್ಬರೂ ಸ್ನೇಹಿತರಾಗಿದ್ದರು. ಇಬ್ಬರೂ ಸೇರಿ ಹಣ್ಣಿನ ಸಗಟು ವ್ಯಾಪಾರ ಮಾಡುತ್ತಿದ್ದರು ಎನ್ನುವುದು ಸುಳ್ಳು. ಇಬ್ಬರಿಗೂ ಸಹ ಸಾಕಷ್ಟು ದುಡಿಮೆ ಇರಲಿಲ್ಲ. ಇಬ್ಬರಿಗೂ ಸಾಕಷ್ಟು ದುಡಿಮೆ ಇದ್ದು , ಲಾಭಾಂಶದಲ್ಲಿ ಶೇರ್ ಮಾಡಿಕೊಳ್ಳುವಾಗ ಇಬ್ಬರ ಮಧ್ಯ ವೈಮನಸ್ಸು ಉಂಟಾಗಿತ್ತು ಎನ್ನುವುದು ಸುಳ್ಳು.

ದಿ.17-03-2023 ರಂದು ನನ್ನ ಗಂಡ ಮರಣ ಹೊಂದಿದ ಸ್ಥಳಕ್ಕೆ ಹೋದಾಗ ಚಾಸಾ-9 ಇವರು ಸಹ ಕಾರಣಾಂತರದಿಂದ ಆ ಸ್ಥಳಕ್ಕೆ ಬಂದಿರುತ್ತಾರೆ ಎನ್ನುವುದು ಸುಳ್ಳು. ಆ ಸ್ಥಳದಲ್ಲಿ ನನ್ನ ಗಂಡ ಮತ್ತು ಚಾಸಾ-9 ಇವರ ಮಧ್ಯ ಜಗಳವಗಿದ್ದು, ಆ ಸ್ಥಳದಲ್ಲಿ ಚಾಸಾ-9 ಇವರು ನನ್ನ ಗಂಡನಿಗೆ ಹೊಡೆದು ಕೊಲೆ ಮಾಡಿರುತ್ತಾರೆ ಎನ್ನುವುದು ಸುಳ್ಳು. ನನ್ನ ಗಂಡನಿಗೆ ಮೊದಲಿನಿಂದಲೂ ಕುಡಿಯುವ ಅಭ್ಯಾಸವಿತ್ತು ಎನ್ನುವುದು ಸುಳ್ಳು. ಸದರಿ

ದಿನಾಂಕದಂದು ನನ್ನ ಗಂಡ ಸಿಕ್ಕಾಪಟ್ಟೆ ಮಧ್ಯ ಪಾನ ಮಾಡಿದ್ದರು ಎನ್ನುವುದು ಸುಳ್ಳು. ನನ್ನ ಗಂಡ ಮತ್ತು ಚಾಸಾ-9 ಇವರ ಮಧ್ಯ ಜಗಳವಾಗಿದ್ದು ,ಆಗ ಚಾಸಾ-9 ಇವರು ನನ್ನ ಗಂಡನಿಗೆ ಹೊಡೆದಾಗ ನನ್ನ ಗಂಡ ಒಡೆದ ಗಾಜಿನ ಬಾಟಲ್ ಮೇಲೆ ಬಿದ್ದು , ಆತನಿಗೆ ಏಟು ಆಗಿರುತ್ತದೆ ಎನ್ನುವುದು ಸುಳ್ಳು. ನಶೆಯಲ್ಲಿ ತಿರುಗಿದಾಗ ಬೆನ್ನಿಗೆ ಗಾಜಿನ ಚೂರು ತಾಗಿ ಏಟಾಗಿರುತ್ತದೆ ಎನ್ನುವುದು ಸುಳ್ಳು.

ಆರೋಪಿತರಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎನ್ನುವುದು ಸುಳ್ಳು. ಆರೋಪಿತರನ್ನು ಹೇಗಾದರೂ ಮಾಡಿ ಸಿಕ್ಕಿಹಾಕಿಸಬೇಕೆಂಬ ಉದ್ದೇಶದಿಂದ ನಾನು ಮತ್ತು ನಮ್ಮ ಸಂಬಂಧಿಕರು ಎಲ್ಲರೂ ಸೇರಿ ಮತ್ತು ಚಾಸಾ-9 ವಿಚಾರ ಮಾಡಿ , ಮಾರನೇ ದಿನ ಆರೋಪಿತರ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು.

ನಿಪಿ.1 ದೂರಿನಲ್ಲಿ ಹೇಳಿದ ಪ್ರಕಾರ ಯಾವುದೇ ರೀತಿಯ ಘಟನೆ ನಡೆದಿಲ್ಲ ಎನ್ನುವುದು ಸುಳ್ಳು. ಅದೇ ಪ್ರಕಾರ ನಿಪಿ.8 ರಂತೆ ಸಹಿತ ನಾನು ಹೇಳುವ ಪ್ರಕಾರ ಯಾವುದೇ ಪಂಚನಾಮೆ ಮಾಡಿಲ್ಲ ಎನ್ನುವುದು ಸುಳ್ಳು. ನನ್ನ ಸಮಕ್ಷಮ ಪೊಲೀಸರು ಸ್ಥಳದಲ್ಲಿ ನಿಪಿ.9 ನಕ್ಷೆ ತಯಾರಿಸಿಲ್ಲ ಎನ್ನುವುದು ಸುಳ್ಳು. ನಿಪಿ.10 ಮತ್ತು 11 ಫೊಟೋಗಳನ್ನು ನನ್ನ ಸಮಕ್ಷಮ ತೆಗೆಸಿಲ್ಲ ಎನ್ನುವುದು ಸರಿಯಲ್ಲ.

1 ನೇ ಆರೋಪಿ ನಸ್ರೂಲ್ಲಾ ಮತ್ತು ಚಾಸಾ-9 ಅಬಿದುಲ್ಲಾ ಇವರಿಬ್ಬರ ಮಧ್ಯ ಯಾವುದೇ ಸ್ನೇಹ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. 1 ನೇ ಆರೋಪಿ ಮತ್ತು ನನ್ನ ಗಂಡನ ಮಧ್ಯ ಸ್ನೇಹ ಇರುವುದಿಲ್ಲ. ನಾನು, ಚಾಸಾ-9 ಮತ್ತು 10 ಸೇರಿ ಸಂಚು ರೂಪಿಸಿ ಆರೋಪಿತರನ್ನು ಹೇಗಾದರೂ ಮಾಡಿ ಸಿಕ್ಕಿಹಾಕಿಸಬೇಕೆಂಬ ದುರುದ್ದೇಶದಿಂದ ಸುಳ್ಳು ದೂರು ನೀಡಿರುತ್ತೇವೆ ಎನ್ನುವುದು ಸರಿಯಲ್ಲ.

ನನ್ನ ಗಂಡನ ಮೃತ ದೇಹವನ್ನು ರಾತ್ರಿ ಸಮಯದಲ್ಲಿ ಆಸ್ಪತ್ರೆಗೆ ಸಾಗಿಸಿದೆವು. ಆ ಸಮಯದಲ್ಲಿ ಚಾಸಾ-9 ಮತ್ತು 10 ಇರಲಿಲ್ಲ. ಚಾಸಾ-9 ಅಬಿದುಲ್ಲಾ ಇವರು ಅದಕ್ಕಿಂತ ಪೂರ್ವದಲ್ಲಿ ಅವರಿಗೆ ಗಾಯವಾಗಿದ್ದರಿಂದ ಅವರು ಆಸ್ಪತ್ರೆಗೆ ಹೋಗಿದ್ದರು. ಚಾಸಾ-9

ಇವರಿಗೆ ಗಾಯವಾಗಿದ್ದರಿಂದ ನನ್ನ ಗಂಡನ ಶವವನ್ನು ಆಸ್ಪತ್ರೆಗೆ ಸಾಗಿಸುವ ಪೂರ್ವದಲ್ಲಿ ಅವರು ಆಸ್ಪತ್ರೆಗೆ ಹೋಗಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀಸವಾಲುಃ- 2 ನೇ ಆರೋಪಿ ಶ್ರೀ ವಿ ಎಂ.ಎನ್ / ಎಸ್ ಎಂ.ಎಲ್. ವಕೀಲರಿಂದ.

ಅ.ಸಾ.2 ಮತ್ತು 3 ಇವರ ಮತ್ತು ಈ ಸಾಕ್ಷಿಯನ್ನು ಒಂದೇಬಾರಿಗೆ ಪಾಟೀಸವಾಲು ಮಾಡುವುದು ಅವಶ್ಯ ಇರುತ್ತದೆ, ಪ್ರತ್ಯೇಕ-ಪ್ರತ್ಯೇಕ ಪಾಟೀಸವಾಲು ಮಾಡಿದ್ದಲ್ಲಿ ಪ್ರತಿರಕ್ಷಗೆ ತೊಂದರೆಯುಂಟಾಗುವ ಸಾಧ್ಯತೆ ಇರುತ್ತದೆ ಆದ್ದರಿಂದ ಪಾಟೀಸವಾಲಿಗೆ ಸಮಯ ನೀಡಬೇಕೆಂದು ವಿನಂತಿಸಿದ್ದು , ಅನುಮತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

sd/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.